## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ ಸಂಖ್ಯೆಃ- 246/2023

| | | |
|---|---|---|
| ಸಾಕ್ಷಿದಾರನ ಹೆಸರು | : ಜಯಮ್ಮ | ಪಿ.ಡಬ್ಲ್ಯೂ-11 |
| ತಂದೆಯ /ಗಂಡನ ಹೆಸರು | : ವೆಂಕಟರಾಜು | ಸಿ.ಡಬ್ಲ್ಯೂ-17 |
| ವಯಸ್ಸು | : 74 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಗಾಂಧಿನಗರ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 27.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನ್ನ ಬಳಿ ವಾಹನಗಳಿದ್ದು, ಅದರಲ್ಲಿ ಒಂದು ಆಟೋ ಕೂಡ ಇದ್ದು, ಅದರ ನಂಬರ್ ನನಗೆ ನೆನಪಿರುವುದಿಲ್ಲ. ನಾನು ಸದರಿ ಆಟೋವನ್ನು ಸಾದಿಕ್ ಎನ್ನುವವರಿಗೆ 10-12 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತೇನೆ. ನಾನು ಸದರಿ ಆಟೋದ ದಾಖಲೆಗಳನ್ನು ಸಹ ಮಾರಾಟ ಮಾಡಿದವರಿಗೆ ನೀಡಿರುತ್ತೇನೆ. ನಂತರ ಆಟೋವನ್ನು ಅವರ ಹೆಸರಿಗೆ ಬದಲಾಯಿಸಿಕೊಂಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸಾದಿಕ್ ರವರು ಸದರಿ ಆಟೋವನ್ನು ಬೇರೆಯವರಿಗೆ ಮಾರಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಯಾರಿಗೆ ಮಾರಿರುತ್ತಾರೆ ಎಂದು ನನಗೆ ತಿಳಿದುಬಂದಿಲ್ಲ. ನಂತರ ಪೊಲೀಸರು ನನ್ನನ್ನು ಸದರಿ ಆಟೋವನ್ನು ಮಾರಿದ ಬಗ್ಗೆ ವಿಚಾರಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

2. ನಿಮ್ಮ ಹೆಸರಿನಲ್ಲಿದ್ದ ಆಟೋದ ನೊಂದಣಿ ಸಂಖ್ಯೆ- ಕೆಎಃ- 05 ಬಿಃ-5019 ಆಗಿರುತ್ತದೆ ಎಂದರೆ , ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

3. ಈ ಮೇಲೆ ಹೇಳಿದ ಆಟೋ ನೊಂದಣಿ ಸಂಖ್ಯೆ- ಕೆಎಃ- 05 ಬಿಃ-5019 10-12 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತೀರಿಯೇ? ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಪೊಲೀಸರ ಮುಂದೆ ಹೇಳಿಕೆ ನೀಡುವಾಗ 10-12 ವರ್ಷಗಳ ಹಿಂದೆ ಮಾರಾಟ ಮಾಡಿರುವ ಬಗ್ಗೆ ಹೇಳಿರುತ್ತಿರಿಯೇ ಎಂದರೆ? ಸಾಕ್ಷಿಯು ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿ ಯಾವುದೇ ರೀತಿ ಹೇಳಿಕೆ ನೀಡಿರುವುದಿಲ್ಲ ಅದರಲ್ಲಿ 10-12 ವರ್ಷಗಳ ಮಾರಾಟ ಮಾಡಿರುತ್ತೀರೆಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ವ್ಯಕ್ತಿಯ ಹೆಸರಿಗೆ ಸದರಿ ಆಟೋ ಸಂಬಂಧಿಸಿದ ದಾಖಲೆಗಳು ಬದಲಾವಣೆ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈಗಲೂ ಸಹ ಆಟೋ ನನ್ನ ಹೆಸರಿನಲ್ಲಿದ್ದು, ಮಾರಾಟ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:– ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**